ಶ್ರೀ ಎ. ರಾಮದಾಸ್:- ಕಳೆದ ವರ್ಷದ ಬಜೆಟ್ ಸೆಕ್ಷನ್‌ನಲ್ಲಿ ನನ್ನ ಪ್ರಶ್ನೆಗೆ ಇದೇ ತರಹ ಉತ್ತರವನ್ನು ತಾವು ಕೊಟ್ಟಿದ್ದೀರಿ. ಆ ಸಂದರ್ಭದಲ್ಲಿ ಚರ್ಚೆಯಾದ ನಂತರದಲ್ಲಿ ನಗರಪಾಲಿಕೆಯ ವ್ಯಾಪ್ತಿಯೊಳಗೆ ಬರುತ್ತಿರುವಂತಹ 14 ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತಹ ರಸ್ತೆಗಳಿವೆ, ಆ ರಸ್ತೆಗಳನ್ನು ಸಂಪೂರ್ಣವಾಗಿ ಸುಸ್ಥಿತಿಗೆ ತಂದು ಅದನ್ನು ನಗರ ಪಾಲಿಕೆಗೆ ಹ್ಯಾಂಡ್ ಓವರ್ ಮಾಡಲಿಕ್ಕೋಸ್ಕರವಾಗಿ ಸರ್ಕಾರದಿಂದ ಒಂದು ಆದೇಶವನ್ನು ಹೊರಡಿಸಿದ್ದೀರಿ. ಆದರೆ ಇವತ್ತೂ ಕೂಡ ಅದು ಎಕ್ಸಿಕ್ಯೂಟ್ ಆಗಿಲ್ಲ, ಇಲ್ಲಿ ಸಮಸ್ಯೆ ಇರುವಂತಹದು. ಮೈಂಟೆನೆನ್ಸ್ ಏನು ಕೊಡಬೇಕಾಗಿದೆ ಮತ್ತು ಈ ಕಾರ್ಯ ಪ್ರಾರಂಭವಾಗಬೇಕಾಗಿದೆ. ಇವತ್ತೂ ಕೂಡ ತಾವು ಕೊಟ್ಟಿರುವಂತಹ ಉತ್ತರದಲ್ಲಿ ರಸ್ತೆಯನ್ನು ಡಾಂಬರೀಕರಣ ಮಾಡಲು ಯೋಜಿಸಲಾಗಿದೆ ಎಂದು ಹೇಳಿದ್ದೀರಿ. ಅದು ಒಂದು ವರ್ಷಗಳ ಕಾಲದಿಂದಲೂ ಕೂಡ ಇದೇ ರೀತಿ ಇದೆ. ಯಾವ ನಿರ್ದಿಷ್ಟವಾದಂತಹ ಸಮಯದೊಳಗೆ ಡಾಂಬರೀಕರಣವನ್ನು ಮುಗಿಸುತ್ತೀರಿ? ಯಾವತ್ತು ನಗರಪಾಲಿಕೆಗೆ ಹ್ಯಾಂಡ್ ಓವರ್ ಮಾಡುತ್ತೀರಿ? ಒಂದು ಕಿಲೋಮೀಟರ್‌ಗೆ ಮೈಂಟೆನೆನ್ಸ್‌ಗೋಸ್ಕರವಾಗಿ ನೀವು ಅವರಿಗೆ ಏನನ್ನು ಕೊಡುತ್ತೀರಿ? ದಯವಿಟ್ಟು ತಾವು ಈ ಮೂರು ವಿಚಾರಗಳನ್ನು ಹೇಳಬೇಕು.

ಶ್ರೀ ಧರ್ಮಸಿಂಗ್:- ಸರ್ಕಾರ ಹ್ಯಾಂಡ್ ಓವರ್ ಮಾಡತಕ್ಕಂಥದ್ದು, ನಾವು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ, ಅದು ಬಂದ ನಂತರ ನಾವು ಹಸ್ತಾಂತರ ಮಾಡುತ್ತೇವೆ.?

ಬೆಳಗಾಂ ವಿಭಾಗದ ದೇವಸ್ಥಾನಗಳಿಗೆ ಮಂಜೂರಾದ ಹಣ

67 (296) ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ದನಗೌಡ (ಮುಂಡರಗಿ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಸರ್ಕಾರದಿಂದ ದೇವಸ್ಥಾನಗಳಿಗೆ ಬೆಳಗಾವಿ ವಿಭಾಗಕ್ಕೆ ಮಂಜೂರಾದ ಹಣ ತೆಗೆದುಕೊಳ್ಳಲು ಟ್ರಸ್ಟ್ ಕಮಿಟಿ ಮಾಡುವ ತೊಂದರೆಯಿಂದ ಖರ್ಚಾಗದೇ ಹಿಂದಕ್ಕೆ ಪಡೆದಿರುವ ಹಣವೆಷ್ಟು ಹಾಗೂ ಆ ದೇವಸ್ಥಾನಗಳ ವಿವರ ನೀಡವುದು?

2. ಹಾಗೇ ಹಿಂದಕ್ಕೆ ಪಡೆದ ಹಣವನ್ನು ಅದೇ ದೇವಸ್ಥಾನಗಳಿಗೆ ಮತ್ತೆ ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದು, ಸದರಿ ಹಣವನ್ನು ಮರಳಿನೀಡಲಾಗಿದೆಯೇ?

3. ಕೊಡದಿದ್ದರೆ, ಯಾವಾಗ ನೀಡಲಾಗುವುದು?

1. ಬೆಳಗಾಂ ವಿಭಾಗಕ್ಕೆ ಮಂಜೂರಾದ ಹಣ ತೆಗೆದುಕೊಳ್ಳಲು ಬಾಂಬೆ ಪಬ್ಲಿಕ್ ಟ್ರಸ್ಟ್ 1950 ಕಾಯ್ದೆಯನ್ವಯ ಟ್ರಸ್ಟ್ ಕಮಿಟಿ ರಚನೆಯಾಗದಿರುವ ತೊಂದರೆಯಿಂದ ಖರ್ಚಾಗದೆ ಉಳಿದ ಮೊತ್ತ ಹಿಂದಕ್ಕೆ ಪಡೆದಿರುವ ಹಣ ರೂ. 36.10 ಲಕ್ಷಗಳ ಮತ್ತು ಇದರ ಮೇಲಿನ ಬಡ್ಡಿ ಹಣ ರೂ. 4,67,468-00 ಒಟ್ಟು 40,77,468-00 ರೂ. ಗಳು.

(1998-99ನೇ ಸಾಲಿನಲ್ಲಿ ಹಿಂದಕ್ಕೆ ಪಡೆದ ಧಾರ್ಮಿಕ ಸಂಸ್ಥೆಗಳ ವಿವರ ಅನುಬಂಧ-1-6ರಲ್ಲಿ ಲಗತ್ತಿಸಿದೆ).

2. ಹಿಂದಕ್ಕೆ ಪಡೆದ ಹಣದಲ್ಲಿ 20.00 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಅದೇ ದೇವಸ್ಥಾನಗಳಿಗೆ ಕೊಡುವ ಬಗ್ಗೆ ಧರ್ಮ ದತ್ತಿ ಆಯುಕ್ತರು, ಬೆಳಗಾಂ ಇವರು ಪರಿಶೀಲಿಸಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವರು.

3. ಮೇಲೆ ತಿಳಿಸಿದಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

ಅನುಬಂಧ - 1

1998-99ನೇ ಸಾಲಿನಲ್ಲಿ ಮಂಜೂರಾಗಿ ಬಿಡುಗಡೆಯಾದ ಬಾಕಿ ಉಳಿದ ವಿವರ

ಉತ್ತರ ಕನ್ನಡ ಜಿಲ್ಲೆ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಸರ್ಕಾರಿ ಆದೇಶ ಸಂಖ್ಯೆ	ಮಂಜೂರಾದ ಮೊತ್ತ
1	2	3	4
1.	ಶ್ರೀ ದೈವಜ್ಞ ಬ್ರಾಹ್ಮಣ ಕಲ್ಯಾಣ ಮಂಟಪ, ಅಂಕೋಲ	ಕಂಇ 111 ಮುಆಬಿ 98, ದಿನಾಂಕ 31-3-99	50,000-00
2.	ಶ್ರೀ ಗಣೇಶ ದೇವ ದೈವಜ್ಞ ಬ್ರಾಹ್ಮಣ ಸೇವಾ ಸಂಘ, ಅಂಕೋಲ	- " -	50,000-00
3.	ಶ್ರೀ ಶಂಭುಲಿಂಗೇಶ್ವರ ದೇ: ಮಂಕಿ ಗ್ರಾಮ ಹೊನ್ನಾವರ	- " -	25,000-00
4.	ಶ್ರೀರಾಮೇಶ್ವರ ದೇ: ಕೊಡಾಣಿ ಗ್ರಾಮ	- " -	25,000-00
5.	ಶ್ರೀಸದಾಸರ್ವೇಶ್ವರ ಮತ್ತು ಅಮ್ಮನವರ ದೇ: ಅಘನಾಶಿನಿ ಕುಮುಟಾ	- " -	25,000-00
6.	ಶ್ರೀರುದ್ರಪಾದೇಶ್ವರ ದೇ: ಗೋಕರ್ಣ	- " -	25,000-00
7.	ಲೋಕನಾಥೇಶ್ವರ ದೇ: ಕಾಗಾಲ, ಕುಮುಟಾ	- " -	25,000-00
8.	ಶ್ರೀದಾಂಡೇಲಿಯಪ್ಪ ದೇ: ತೆರವಾಡ ದಾಂಡೇಲಿ, ಹಳಿಯಾಳ	- " -	10,000-00
9.	ಶ್ರೀಗ್ರಾಮದೇವಿ ದೇ: ಕುದ್ರುಕಂಚನಹಳ್ಳಿ, ಹಳಿಯಾಳ	- " -	10,000-00
10.	ಶ್ರೀದೊಣೆ ಕೊರವರ ದೇ: ತೆರಗಾಂವ, ಹಳಿಯಾಳ	- " -	10,000-00
11.	ಶ್ರೀ 1008 ಪಾರ್ಶ್ವನಾಥ ಜೈನ ದಿಗಂಬರ ಜೀರ್ಣೋದ್ಧಾರ ಸಮಿತಿ, ತೆರಂಗಾಂವ್	- " -	10,000-00

1	2	3	4
12.	ಶ್ರೀಹರಿವಿಠಲ ರುಕ್ಮಾಯಿ ದೇ: ಬಸವಳ್ಳಿ, ಹಳಿಯಾಳ ತಾ:	ಕಂಇ 111 ಮುಲಿಬಿ 98, ದಿನಾಂಕ 31-3-99	10,000-00
13.	ಶ್ರೀಲಕ್ಷ್ಮೀ ದೇ: ಯಡೋಗಾ, ಹಳಿಯಾಳ	- " -	10,000-00
14.	ಶ್ರೀಮಾರಮ್ಮ ದೇ: ಯಡೋಗಾ, ಹಳಿಯಾಳ	- " -	10,000-00
15.	ಶ್ರೀಸಿದ್ಧಾರೂಢ ಮಠ, ಮುರ್ಕವಾಡ, ಹಳಿಯಾಳ ತಾ	- " -	10,000-00
16.	ಶ್ರೀಸರ್ವೋದಯ ಸಾಯಿ ಭಗವಾನ್ ಆದ್ಯಾತ್ಮ ಮಂದಿರ ಜಿ.ಕೆ. ಹಳ್ಳಿ	- " -	10,000-00
17.	ಶ್ರೀಸಂಬಸದಾಶಿವ ದೇ: ತುಡಚೀಡು, ಯಲ್ಲಾಪುರ ತಾ	- " -	10,000-00
18.	ಶ್ರೀಗೋಪಾಲಕೃಷ್ಣ ದೇ: ಕನ್ನೇನಹಳ್ಳಿ ಯಲ್ಲಾಪುರ	- " -	10,000-00
19.	ಶ್ರೀಮುಕಾಂಬಿಕಾ ದೇ: ಕವಡಿಕೆರೆ, ಯಲ್ಲಾಪುರ	- " -	10,000-00
20.	ಶ್ರೀಮಾರಿಕಾಂಬ ದೇ: ತುಡಗುಣಿ, ಯಲ್ಲಾಪುರ	- " -	10,000-00
21.	ಶ್ರೀಕೋಟಿ ಸಂಬುಲೀಂಗೇಶ್ವರ ದೇ: ತುಡಗುಣಿ	- " -	10,000-00
22.	ಶ್ರೀ ಗಣಪತಿ ದೇ: ಚಾಂದಗುಳಿ, ಯಲ್ಲಾಪುರ	- " -	10,000-00
23.	ಶ್ರೀರಾಮಲಿಂಗೇಶ್ವರ ದೇ: ಬಿಡಸಗಾಂವ್, ಮುಂಡಗೋಡು	- " -	10,000-00
24.	ಶ್ರೀ ಸಿದ್ದರಾಮೇಶ್ವರ ದೇ: ಮುಂಡಗೋಡು	- " -	10,000-00
25.	ಶ್ರೀ ರೇಣುಕಾ ದೇ: ಚೌಡಹಳ್ಳಿ, ಮುಂಡಗೋಡು	- " -	10,000-00
26.	ಶ್ರೀ ಈಶ್ವರ ದೇ: ತಟ್ಟಿಹಳ್ಳಿ, ಮುಂಡಗೋಡು	- " -	10,000-00
27.	ಶ್ರೀಮಾರುತಿ ಮಂದಿರ, ಹುನಗುಂದ, ಮುಂಡಗೋಡು	- " -	10,000-00

1	2	3	4
28.	ಶ್ರೀ ವೀರಭದ್ರೇಶ್ವರ ದೇ: ತೊಗ್ಗಳ್ಳಿ ಮುಂಡಗೋಡು	ಕಂಇ 111 ಮುಆಬಿ 98, ದಿನಾಂಕ 31-3-99	10,000-00
29.	ಶ್ರೀಈಶ್ವರ ದೇ: ಕ್ಯಾತನಕೇರಿ, ಮುಂಡಗೋಡು	- " -	10,000-00
30.	ಶ್ರೀ ಈಶ್ವರ ದೇ: ಮೈನಳ್ಳಿ, ಮುಂಡಗೋಡು	- " -	10,000-00
31.	ಶ್ರೀಚಾದಾರ ದೇ: ಮಾಗಾಳಿ, ಕಾರವಾರ	ಕಂಇ 10 ಮುಆಬಿ 98, ದಿನಾಂಕ 31-3-99	20,000-00
32.	ಶ್ರೀಖಾನಬೀರ ದೇ: ಬಾವಿತೇರ ಅಂಕೋಲ ತಾಲ್ಲೂಕು.	- " -	20,000-00
33.	ಶ್ರೀತರತಿ ಮಠ ಟ್ರಸ್ಟ್ ಗಣಪತಿ ಹಾಗೂ ಪದ್ಮಾವತಿ ದೇ:ದ ಜೀರ್ಣೋದ್ಧಾರ, ಸಿದ್ದಾಪುರ	ಕಂಇ 197 ಮುಆಬಿ 98, ದಿನಾಂಕ 9-7-99	25,000-00
34.	ಶ್ರೀಕಲ್ಲೇಶ್ವರ ಭಕ್ತರುಂದ, ಕೋಲಶಿರ್ಸಿ ತಾ: ಸಿದ್ದಾಪುರ ದೇವಸ್ಥಾನ ಹಾಗೂ ಕಲಾ ಭವನ ನಿರ್ಮಾಣಕ್ಕೆ	- " -	25,000-00
35.	ಶ್ರೀಜಾತಕ ಮಹಾಗಣಪತಿ ದೇ: ಟ್ರಸ್ಟ್ ಚಪ್ಪರಮನೆ, ಸಿದ್ದಾಪುರ ಇದರ ಚಂದ್ರಶಾಲೆ ಕಟ್ಟಡ ಕಾಮಗಾರಿ ಕೆಲಸ	- " -	25,000-00
		ಒಟ್ಟು	5,70,000-00

ಅನುಬಂಧ - 2

1998-99ನೇ ಸಾಲಿನಲ್ಲಿ ಮಂಜೂರಾಗಿ ಬಿಡುಗಡೆಯಾದ ಬಾಕಿ ಉಳಿದ ವಿವರ ಹಾವೇರಿ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಸರ್ಕಾರಿ ಆದೇಶ ಸಂಖ್ಯೆ	ಮಂಜೂರಾದ ಮೊತ್ತ
1	2	3	4
1.	ಶ್ರೀ ಹನುಮಂತ ದೇ: ಪನಹಳ್ಳಿ, ಶಿಗ್ಗಾಂವ್ ತಾಲ್ಲೂಕು	ಕಂಇ 110 ಮುಆಬಿ 98, ದಿನಾಂಕ 31-3-99	15,000-00

1	2	3	4
2.	ಶ್ರೀ ಗಂಗಾಪರಮೇಶ್ವರಿ ದೇ: ಹಿರೇ ಲಿಂಗದಹಳ್ಳಿ ತಾಲ್ಲೂಕು ಹಾವೇರಿ	ಕಂಇ 110 ಮುಆಬಿ 98, ದಿನಾಂಕ 31-3-99	20,000-00
3.	ಶ್ರೀ ಬೀರೇಶ್ವರ ದೇ: ಕಾಟೇಹನಹಳ್ಳಿ ಹಾವೇರಿ ತಾಲ್ಲೂಕು	ಕಂಇ 09 ಮುಆಬಿ ದಿನಾಂಕ 8-2-2001	20,000-00
4.	ಶ್ರೀಬೀರೇಶ್ವರ ದೇ: ಕಾಟೇನಹಳ್ಳಿ ಹಾವೇರಿ ತಾಲ್ಲೂಕು.	- " -	10,000-00
5.	- " -	- " -	10,000-00
6.	- " -	- " -	10,000-00
7.	ಶ್ರೀ ದುರ್ಗಾದೇವಿ ಗುಡಿ, ಗುತ್ತಲತಾಂಡ ಹಾವೇರಿ	- " -	10,000-00
8.	ಶ್ರೀ - " -	- " -	10,000-00
9.	ಶ್ರೀ - " -	- " -	10,000-00
10.	ಶ್ರೀ ವೀರಭದ್ರೇಶ್ವರ ದೇ: ವಾಸನ, ಹಾನಗಲ್ ತಾಲ್ಲೂಕು	ಕಂಇ 111 ಮುಆಬಿ 98, ದಿನಾಂಕ 31-3-99	20,000-00
11.	ಬಾಳೂರು ತಾಂಡ ಶಿವಾಲಾಲ್ ದೇ: ಹಾನಗಲ್	- " -	20,000-00
12.	ಶ್ರೀವರಸಿದ್ಧಿವಿನಾಯಕ ದೇ: ಶಿಳವಳ್ಳಿ, ಹಾನಗಲ್	- " -	20,000-00
13.	ಶ್ರೀಶರೇಗಲ್ ಗ್ರಾಮ ದೇವತೆ ಹಾನಗಲ್	- " -	20,000-00
14.	ಶ್ರೀಶಂಬವನಾಥ ಬಿನ್ ಮಂದಿರ, ಬಾಳಂಬೀಡ, ಹಾನಗಲ್	- " -	20,000-00
15.	ಶ್ರೀವೆಂಕಟೇಶ್ವರ ದೇ: ಬೊಮ್ಮನಹಳ್ಳಿ ಹಾನಗಲ್	- " -	20,000-00
16.	ಶ್ರೀ ಮಾರುತಿ ದೇ: ಅಂದಲಗಿ, ಶಿಗ್ಗಾಂವ್ ತಾಲ್ಲೂಕು.	- " -	15,000-00
17.	ಶ್ರೀಗ್ರಾಮದೇವತೆ ದೇ: ತಡಸ ತಾಲ್ಲೂಕು ಶಿಗ್ಗಾಂವ್	- " -	15,000-00

1	2	3	4
18.	ಶ್ರೀಕಾಳಿಕಾಂಬ ದೇವಿ ಕಜ್ಜರಿ ತಾ: ರಾಣೆಬೆನ್ನೂರು	ಕಂಇ 111 ಮುಆಬಿ 98, ದಿನಾಂಕ 31-3-99	20,000-00
19.	ಶ್ರೀಬೆಟ್ಟದ ಮಲ್ಲಪ್ಪ ದೇ: ಬ್ಯಾಡಗಿ	- " -	20,000-00
20.	ಶ್ರೀ ಸಿದ್ಧಲಿಂಗೇಶ್ವರ ದೇ: ಕೋಡ, ತಾ: ಹಿರೇಕೆರೂರು	- " -	20,000-00
21.	ಶ್ರೀಬೂದಿಸ್ವಾಮಿ ದೇ: ಚಿಕ್ಕಮಾಗನೂರು, ತಾ: ರಾಣೆಬೆನ್ನೂರು	- " -	25,000-00
22.	ಶ್ರೀ ಆಲದಮ್ಮಗುಡಿ, ವೀರಾಪುರ, ತಾಲ್ಲೂಕು ರಾಣೆಬೆನ್ನೂರು	ಕಂಇ 10 ಮುಆಬಿ 2001, ದಿನಾಂಕ 19-3-2001	20,000-00
23.	ಶ್ರೀ ವೀರಭದ್ರೇಶ್ವರ ದೇ: ಟ್ರಸ್ಟ್ ಹಾನಗಲ್	ಕಂಇ 107 ಮುಆಬಿ 98, ದಿನಾಂಕ 9-7-99	50,000-00
24.	ಶ್ರೀ ವೆಂಕಟೇಶ್ವರ ದೇ: ಬೊಮ್ಮನಹಳ್ಳಿ ಹಾನಗಲ್	- " -	25,000-00
25.	ಶ್ರೀವಿಠಲ ಮಂದಿರ, ತಿಳವಳ್ಳಿ, ಹಾನಗಲ್	- " -	25,000-00
26.	ಶ್ರೀ ಗೆರಗುಡ್ಡ ಬಸವಣ್ಣ ದೇವರು, ಹಿರೇಉಲ್ಲಾಳ, ಹಾನಗಲ್	- " -	25,000-00
			4,95,000-00

ಅನುಬಂಧ - 3

1998-99ನೇ ಸಾಲಿನಲ್ಲಿ ಮಂಜೂರಾಗಿ ಬಿಡುಗಡೆಯಾದ ಬಾಕಿ ಉಳಿದ ವಿವರ ಗದಗ್ ಜಿಲ್ಲೆ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಸರ್ಕಾರಿ ಆದೇಶ ಸಂಖ್ಯೆ	ಮಂಜೂರಾದ ಮೊತ್ತ
1	2	3	4
1.	ಶ್ರೀ ಶಿವಯೋಗಿಸಿದ್ದರಾಮೇಶ್ವರ ಟ್ರಸ್ಟ್ ಕಮೀಟಿ ಹಿರೇವಡ್ಡಟ್ಟಿ, ತಾಲ್ಲೂಕು ಮುಂಡರಗಿ	ಕಂಇ 111 ಮುಆಬಿ 98, ದಿನಾಂಕ 31-3-99	25,000-00

1	2	3	4
2.	ಶ್ರೀ ಶಿವಕಲ್ಯಾಣ ದೇ: ಕಲಕೇರಿ ತಾ. ಮುಂಡರಗಿ	ಕಂಇ 111 ಮುಆಬಿ 98, ದಿನಾಂಕ 31-3-99	25,000-00
3.	ಶ್ರೀ ದ್ಯಾವಮ್ಮ ದೇ: ಡಂಬಳ, ತಾ ಮುಂಡರಗಿ	- " -	25,000-00
4.	ಶ್ರೀ ಸೇವಾಲಾಲ್ ದೇ: ಕಪಿಲಾಯಾತಕಟ್ಟಿ ತಾ: ಗದಗ್	- " -	25,000-00
5.	ಶ್ರೀ ಕಣವೆ ಬಸವೇಶ್ವರ ದೇ: ಕಲಕೇರಿ ತಾ. ಮುಂಡರಗಿ	- " -	25,000-00
6.	ಶ್ರೀ ಬಿದರಳಮ್ಮ ದೇ: ಬಿದರಳ್ಳಿ ತಾ: ಮುಂಡರಗಿ	- " -	25,000-00
7.	ಶ್ರೀ ಕೆಂಚಮ್ಮ ದೇ: ಬಿಳದಡಿ ತಾ. ಮುಂಡರಗಿ	- " -	25,000-00
8.	ಶ್ರೀ ವೀರಭದ್ರೇಶ್ವರ ದೇ: ಶಿರೋಳ ತಾ ಮುಂಡರಗಿ	- " -	25,000-00
9.	ಶ್ರೀಬೀರೇಶ್ವರ ದೇ: ಬಾಗೇವಾಡಿ ತಾ. ಮುಂಡರಗಿ	- " -	25,000-00
10.	ಶ್ರೀ ಕಲ್ಮೇಶ್ವರ ದೇ: ಕಲಕೇರಿ ತಾ. ಮುಂಡರಗಿ	- " -	25,000-00
11.	ಶ್ರೀಮರಿಯಪ್ಪನಸ್ವಾಮಿ ಮಠ ಟ್ರಸ್ಟ್ ಕಮಿಟಿಮೆಣಸಗಿ ರೋಣ ತಾ.	- " -	20,000-00
12.	ಶ್ರೀ ಮಾರುತಿ ದೇ: ಟ್ರಸ್ಟ್ ಕಮಿಟಿ, ರೋಣ ತಾ. ಕದಡಿ,	- " -	20,000-00
13.	ಶ್ರೀ ಭರಮಲಿಂಗೇಶ್ವರ ದೇ: ಟ್ರಸ್ಟ್, ರೋಣ, ಮಲ್ಲಾಪುರ	ಕಂಇ 18 ಮುಆಬಿ 2000, ದಿನಾಂಕ 30-11-2000	20,000-00
14.	ಶ್ರೀ ಭರಮಲಿಂಗೇಶ್ವರ ದೇ: ಟ್ರಸ್ಟ್ ಕಮಿಟಿ ರೋಣ, ಮಲ್ಲಾಪುರ.	- " -	20,000-00

1	2	3	4
15.	ಶ್ರೀ ಬ್ರಹ್ಮಾನಂದ ದೇ: ಟ್ರಸ್ಟ್ ಕಮಿಟಿ, ಮಾಳವಾಡ ರೋಣ	ಕಂಇ 111 ಮುಆಬಿ 98, ದಿನಾಂಕ 31-3-99	20,000-00
16.	ಶ್ರೀ ಕಲ್ಮೇಶ್ವರ ದೇ: ಟ್ರಸ್ಟ್ ಕಮಿಟಿ ಮಾಳವಾಡ ರೋಣ	- " -	20,000-00
17.	ಶ್ರೀ ಶರಣಬಸವೇಶ್ವರ ದೇ: ಹಿರೇಕೊಪ್ಪ ರೋಣ ತಾಲ್ಲೂಕು	- " -	20,000-00
18.	ಶ್ರೀ ಕೃಷ್ಣ ದೇ: ಗಜೇಂದ್ರಗಡ, ರೋಣ ತಾ.	- " -	50,000-00
19.	ಶ್ರೀತಿಮ್ಮಪ್ಪ ದೇ: ಭಾನು ಮಾರ್ಕೆಟ್, ದೇವಾಯಿ ಓಣಿ ಲಕ್ಷ್ಮೇಶ್ವರ	- " -	20,000-00
20.	ಶ್ರೀ ಧರ್ಮಪುರ ಬಸವಣ್ಣ ದೇ: ಹಿರೇಬಣ, ಲಕ್ಷ್ಮೇಶ್ವರ	- " -	20,000-00
21.	ಶ್ರೀ ಗಣಪತಿ ದೇ: ಬಸ್ತಿಕೇರಿ, ಲಕ್ಷ್ಮೇಶ್ವರ	- " -	20,000-00
22.	ಶ್ರೀ ಕನಕ ಕಲ್ಯಾಣ ಮಂಟಪ, ಹುಡ್ಕೋ ಕಾಲೋನಿ ಹತ್ತಿರ ಗದಗ್ ತಾಲ್ಲೂಕು	ಕಂಇ 107 ಮುಆಬಿ	40,000-00
			5,40,000-00

ಅನುಬಂಧ - 4

1998-99ನೇ ಸಾಲಿನಲ್ಲಿ ಮಂಜೂರಾಗಿ ಬಿಡುಗಡೆಯಾದ ಬಾಕಿ ಉಳಿದ ವಿವರ

ಬಿಜಾಪುರ ಜಿಲ್ಲೆ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಸರ್ಕಾರಿ ಆದೇಶ ಸಂಖ್ಯೆ	ಮಂಜೂರಾದ ಮೊತ್ತ
1	2	3	4
1.	ಶ್ರೀ ಮಹಾಶ್ರೀಶಿವಶರಣ ವೀರೇಶ್ವರ ಮಠ ನಾಲಕವಾಡ ಮುದ್ದೇಬೀಹಾಳ	ಕಂಇ 111 ಮುಆಬಿ 98, ದಿನಾಂಕ 31-3-99	20,000-00
2.	ಶ್ರೀ ಶರಣ ಮಲ್ಲಾಲಿಂಗ ಮರಠುಗಿ ಮುದ್ದೇಬಿಹಾಳ ತಾ.	- " -	20,000-00

1	2	3	4
3.	ಶ್ರೀ ಗೋನಾಳ ಶರಣ ಮಠ, ಮುದ್ದೇಬಿಹಾಳ ತಾ.	ಕಂಇ 111 ಮುಆಬಿ 98, ದಿನಾಂಕ 31-3-99	20,000-00
4.	ಶ್ರೀ ಚೌಕೇಶ್ವರ ದೇ: ಹಂರಗಲ ಮುದ್ದೇಬಿಹಾಳ ತಾ.	- " -	20,000-00
5.	ಶ್ರೀಮಾರುತಿ ದೇ: ಕಲದೇವನಹಳ್ಳಿ ಮುದ್ದೇಬಿಹಾಳ ತಾ.	- " -	20,000-00
6.	ಶ್ರೀವಿಠೋಬ ದೇವರ ಗುಡಿ, ಹಿರೂರ ಮುದ್ದೇಬಿಹಾಳ ತಾ.	- " -	20,000-00
7.	ಶ್ರೀಪರಮಾನಂದ ದೇವರ ಗುಡಿ, ಹೂವಿನಹಳ್ಳಿ ಮುದ್ದೇಬಿಹಾಳ ತಾ.	- " -	20,000-00
8.	ಶ್ರೀ ನೀಲಗಂಗಮ್ಮ ಗುಡಿ, ಬಳಗನೂರು, ಮುದ್ದೇಬಿಹಾಳ ತಾ.	- " -	20,000-00
9.	ಶ್ರೀ ಹನುಮಂತ ದೇವರಗುಡಿ, ಹೂವಿನಹಳ್ಳಿ ಮುದ್ದೇಬಿಹಾಳ ತಾ.	- " -	20,000-00
10.	ಶ್ರೀ ಸಿದ್ದೂಬ ದೇ: ಸಾ. ಹೊರವಾಡ, ಬಿಜಾಪುರ ತಾ.	- " -	20,000-00
11.	ಶ್ರೀ ಮಹಾಲಿಂಗೇಶ್ವರ ದೇ: ಹುಜನೂರು ಬಿಜಾಪುರ ತಾ.	- " -	20,000-00
12.	ಶ್ರೀ ಸೇವಾಲಾಲ್ ದೇ: ಮುರುಟಾಪುರ ಬಿಜಾಪುರ ತಾ.	- " -	20,000-00
13.	ಶ್ರೀ ಶಕ್ತಿ ಸೇವಾಲಾಲ್ ಅರಕೇರಿ ವಾರ್ಡ್ ನಂ. 3, ಬಿಜಾಪುರ ತಾ.	- " -	20,000-00
14.	ಶ್ರೀ ಅಮೂಲಾಲ್ ದೇ: ಬಾಯಪಾಸ್ ರಸ್ತೆ ಬಿಜಾಪುರ ತಾ.	- " -	20,000-00
15.	ಶ್ರೀ ಜಗದಾಂಬ ದೇ: ತೋರವಿತಾಂಡ ನಂ. 2, ಬಿಜಾಪುರ ತಾ.	- " -	20,000-00
16.	ಶ್ರೀ ಸಾಮಾಬಾಯಿ ದೇ: ಹುಲನೂರು, ಬಿಜಾಪುರ ತಾ.	- " -	20,000-00

1	2	3	4
17.	ಶ್ರೀ ಪಾಂಡುರಂಗ ದೇ: ಕೋಟ್ಯಾಳ, ಬಿಜಾಪುರ ತಾ.	ಕಂಇ 111 ಮುಲಬಿ 98, ದಿನಾಂಕ 31-3-99	20,000-00
18.	ಶ್ರೀ ಗ್ರಾಮದೇವರ ದೇ: ತಿಕೋಟಾ, ಬಿಜಾಪುರ ತಾ.	- " -	20,000-00
19.	ಶ್ರೀ ಜಗದಾಂಬ ದೇ: ತಿಕೋಟಾ, ಬಿಜಾಪುರ ತಾ.	- " -	20,000-00
20.	ಶ್ರೀ ದ್ಯಾವಮ್ಮನಗುಡಿ, ಬಸವಾಟಿ, ಮುದ್ದೇಬಿಹಾಳ್	- " -	20,000-00
21.	ಶ್ರೀ ಲಕ್ಷ್ಮೀಗುಡಿ, ಚುಮ್ಮಲದಿನ್ನಿ, ಮುದ್ದೇಬಿಹಾಳ್	- " -	20,000-00
22.	ಶ್ರೀ ಶರಣರ ಮಠ, ಕೊಪ್ಪ ಮುದ್ದೇಬಿಹಾಳ	- " -	20,000-00
23.	ಶ್ರೀ ಮಹಾಲಕ್ಷ್ಮೀ ದೇ: ತಾಂಬಾ, ಇಂಡಿ ತಾ.	ಕಂಇ 107 ಮುಲಬಿ 98, ದಿನಾಂಕ 9-7-99	50,000-00
		ಒಟ್ಟು	**4,90,000-00**
	ಬಾಗಲಕೋಟೆ ಜಿಲ್ಲೆ		
1.	ಶ್ರೀ ವೀರಭದ್ರೇಶ್ವರ ದೇ: ಚಿತ್ತಬಾಡಗಿ ಹುನಗುಂದ ತಾ.	ಕಂಇ 111 ಮುಲಬಿ 98, ದಿ. 31-3-99	15,000-00
2.	ಶ್ರೀ ಯಂಡಿಗೇಶ್ವರ ದೇ: ಯಂಡಿಗೇರಿ ಬಾದಾಮಿ ತಾ.	- " -	20,000-00
3.	ಶ್ರೀ ಸಿದ್ದೇಶ್ವರ ದೇ: ಹೊಸೂರು ಬಾದಾಮಿ ತಾ.	- " -	20,000-00
4.	ಶ್ರೀ ಕೃಷ್ಣ ದೇ: ಬಾದಾಮಿ ತಾ.	- " -	20,000-00
5.	ಶ್ರೀ ಗದ್ದಮ್ಮ ದೇವಿ ದೇ: ಹುಲ್ಲಿಕೇರಿ ಬಾದಾಮಿ ತಾ.	- " -	20,000-00
		ಒಟ್ಟು	**95,000-00**

ಅನುಬಂಧ - 5

1998-99ನೇ ಸಾಲಿನಲ್ಲಿ ಮಂಜೂರಾಗಿ ಬಿಡುಗಡೆಯಾದ ಬಾಕಿ ಉಳಿದ ವಿವರ ಧಾರವಾಡ ಜಿಲ್ಲೆ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಸರ್ಕಾರಿ ಆದೇಶ ಸಂಖ್ಯೆ	ಮಂಜೂರಾದ ಮೊತ್ತ
1	2	3	4
1.	ಶ್ರೀ ಚಂದ್ರಮೌಳೀಶ್ವರ ದೇ: ಪೋತನೀಸಗಲ್ಲಿ, ಧಾರವಾಡ	ಕಂಇ 111 ಮುಆಬಿ 98, ದಿನಾಂಕ 31-3-99	30,000-00
2.	ಶ್ರೀ ಹನುಮಂತ ದೇವರ ದೇ: ಹೊನ್ನಾಪುರ ಧಾರವಾಡ	- " -	15,000-00
3.	ಶ್ರೀ ವಿಠೋಬಾ ಮಂದಿರ, ಹೂಲಿಕೆರೆ ಧಾರವಾಡ	- " -	15,000-00
4.	ಶ್ರೀ ಪಾಂಡುರಂಗ ದೇ: ಕೊಟಬಾಗಿ, ಧಾರವಾಡ	- " -	15,000-00
5.	ಶ್ರೀ ಬಸವಣ್ಣ ದೇ: ಬೇಲೂರು, ಧಾರವಾಡ	- " -	15,000-00
6.	ಶ್ರೀ ದ್ಯಾಮವ್ವ (ಗ್ರಾಮ ದೇವರು ದೇ: ತಡಕೋಡ, ಧಾರವಾಡ	- " -	15,000-00
7.	ಶ್ರೀ ಹನುಮಂತ ದೇ: ಮಂಗಳಗಟ್ಟಿ, ಧಾರವಾಡ	- " -	15,000-00
8.	ಶ್ರೀ ವೀರಭದ್ರ ದೇವರ ದೇ: ಶಿವಳ್ಳಿ, ಧಾರವಾಡ	- " -	15,000-00
9.	ಶ್ರೀ ಗ್ರಾಮದೇವಿ ದೇ: ಕಲ್ಲಾಪುರ ಧಾರವಾಡ	- " -	15,000-00
10.	ಶ್ರೀ ವಿಠೋಬಾ ಮಂದಿರ, ಬೇಗೂರು ಧಾರವಾಡ	- " -	15,000-00
11.	ಶ್ರೀ ಬೀರದೇವರ ದೇ: ನೂಲ್ವಿ, ತಾ. ಹುಬ್ಬಳ್ಳಿ	- " -	10,000-00

1	2	3	4
12.	ಶ್ರೀ ವಿಠಲ ರುಕ್ಮಾಯಿ ಮಂದಿರ ನೂಲ್ವಿ ಹುಬ್ಬಳ್ಳಿ	- " -	10,000-00
13.	ಶ್ರೀ ಪೇಟೆಬಸವೇಶ್ವರ ದೇ: ಅರಳೀಕಟ್ಟೆ ಹುಬ್ಬಳ್ಳಿ	- " -	10,000-00
14.	ಶ್ರೀ ಬೀರೇಶ್ವರ ಮಂಟೂರು ತಾ: ಹುಬ್ಬಳ್ಳಿ	- " -	10,000-00
15.	ಶ್ರೀ ಪರಮೇಶ್ವರ ದೇ: ಮಂಟೂರು ತಾ. ಹುಬ್ಬಳ್ಳಿ	- " -	10,000-00
16.	ಶ್ರೀ ಕೂಡಲ ಸಂಗಮ ದೇ: ಅಂಬಟಗೇರಿ ಹುಬ್ಬಳ್ಳಿ	- " -	10,000-00
17.	ಶ್ರೀ ಪಾಂಡುರಂಗ ದೇ: ಕಟ್ಟೂರು ತಾ ಹುಬ್ಬಳ್ಳಿ	- " -	10,000-00
18.	ಶ್ರೀ ಗ್ರಾಮ ದೇವತೆ ದೇ: ಅರಳೀಕಟ್ಟೆ ತಾ ಹುಬ್ಬಳ್ಳಿ	- " -	10,000-00
19.	ಶ್ರೀ ಗುರುಪಾದೇಶ್ವರ ದೇ: ಶಿರಗುಪ್ಪಿ ಹುಬ್ಬಳ್ಳಿ	- " -	10,000-00
20.	ಶ್ರೀ ಮಾರುತಿ ದೇ: ಪರೂರ, ಹುಬ್ಬಳ್ಳಿ	- " -	10,000-00
21.	ಶ್ರೀ ಮುದಿಮಲ್ಲಯ್ಯ ಸಜ್ಜನ ಮಠ ಗಂಗವಾಳ, ಕಲಘಟಗಿ, ಹುಬ್ಬಳ್ಳಿ	- " -	10,000-00
22.	ಶ್ರೀದುರ್ಗಮ್ಮ ದೇ: ಅಂಚಟಗೇರಿ ತಾ ಹುಬ್ಬಳ್ಳಿ	- " -	10,000-00
23.	ಶ್ರೀ ಹನುಮಂತ ದೇವರ ದೇ: ಬಿನ್ನೂರು ತಾ. ಕಲಘಟಗಿ	- " -	10,000-00
24.	ಶ್ರೀ ಕಲ್ಮೇಶ್ವರ ದೇ: ಗಂಜೀಹಟ್ಟಿ, ತಾ. ಕಲಘಟಗಿ	- " -	10,000-00
25.	ಶ್ರೀ ಕರೆಮ್ಮನ ದೇ: (ಹರಿಜನ ಕೇರಿ) ತಾ. ಕಲಘಟಗಿ	- " -	10,000-00

1	2	3	4
26.	ಶ್ರೀ ಗ್ರಾಮದೇವತೆ ದೇ: ಕುರುವಿನಕೊಪ್ಪ ತಾ. ಕಲಘಟಗಿ	- " -	10,000-00
27.	ಶ್ರೀ ಜೈನ ಮಂದಿರ, ಬಿ. ಗುಡಿಹಾಳ, ತಾ. ಕಲಘಟಗಿ	- " -	10,000-00
28.	ಸಮಾಜ ಮಂದಿರ, (ಪ.ಜಾತಿ) ತಾ. ಕಲಘಟಗಿ	- " -	10,000-00
29.	ಬೋವಿ ಸಮಾಜ ಮಂದಿರ, ತಾ. ಕಲಘಟಗಿ	- " -	10,000-00
30.	ಶ್ರೀ ಚರ್ಮತೇಶ್ವರ ಮಠ ವರೂರ ತಾ. ಹುಬ್ಬಳ್ಳಿ	- " -	10,000-00
31.	ಶ್ರೀ ಕರಿಯಮ್ಮದೇ: ಗ್ರಾಮನಗಟ್ಟಿ, ತಾ. ಕಲಘಟಗಿ	- " -	10,000-00
32.	ಶ್ರೀ ಗ್ರಾಮ ದೇವತೆ ಕುರುವಿನಕೊಪ್ಪ ತಾ. ಕಲಘಟಗಿ	- " -	10,000-00
		ಒಟ್ಟು	**3,85,000-00**

ಅನುಬಂಧ - 6

1998-99ನೇ ಸಾಲಿನಲ್ಲಿ ಮಂಜೂರಾಗಿ ಬಿಡುಗಡೆಯಾದ ಬಾಕಿ ಉಳಿದ ವಿವರ ಬೆಳಗಾಂ ಜಿಲ್ಲೆ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಸರ್ಕಾರಿ ಆದೇಶ ಸಂಖ್ಯೆ	ಮಂಜೂರಾದ ಮೊತ್ತ
1	2	3	4
1.	ಶ್ರೀ ಲಕ್ಷ್ಮೀ ದೇ: ಟ್ರಸ್ಟ್ ಯಜ್ಜಲ ಗಜ್ಜ ಗೋಕಾಕ್	ಕಂಇ 60 ಮುಆಬಿ 98, ದಿನಾಂಕ 25-6-99	20,000-00
2.	ಶ್ರೀ ಲಕ್ಷ್ಮೀ ದೇ: ಟ್ರಸ್ಟ್ ದಾಸನಹಟ್ಟಿ ಗೋಕಾಕ್	- " -	10,000-00
3.	ಶ್ರೀ ಮಲ್ಲಿಕಾರ್ಜುನ ದೇ: ಕೆಂಚನಹಳ್ಳಿ, ತಾ. ಚಿಕ್ಕೋಡಿ	- " -	25,000-00

1	2	3	4
4.	ಶ್ರೀ ಕಾಳಿಕಾದೇವಿ ದೇ: ಕೋರನಕೇರಿ ಹುಕ್ಕೇರಿ	ಕಂಇ 60 ಮುಆಬಿ 98, ದಿನಾಂಕ 25-6-99	40,000-00
5.	ಶ್ರೀ ಲಕ್ಷ್ಮೀ ದೇ: ಕೇಸ್ತಿ, ತಾ ಹುಕ್ಕೇರಿ	- " -	40,000-00
6.	ಶ್ರೀ ಮಾರುತಿ ದೇ: ನಿಡೆರೋಣಿ ಹುಕ್ಕೇರಿ ತಾ	- " -	40,000-00
7.	ಶ್ರೀ ದುರ್ಗಾದೇವಿ ದೇ: ನಿಡಸೋನಿ ಹುಕ್ಕೇರಿ ತಾ.	- " -	40,000-00
8.	ಶ್ರೀ ಕಲ್ಮೇಶ್ವರ ದೇ: ಕೆರೂರು, ಚಿಕ್ಕೋಡಿ ತಾ.	- " -	20,000-00
9.	ಶ್ರೀ ವಿಠಲಮಂದಿರ ಕಟ್ಟಡ ಸಾಯಿಂಗ್ಲ ಜಿ.ತಾ	- " -	20,000-00
10.	ಶ್ರೀ ಬಸವೇಶ್ವರ ದೇ: ಅಂಕಲಗಿ, ಚಿಕ್ಕೋಡಿ ತಾ	- " -	20,000-00
11.	ಶ್ರೀ ಪಂಚಲಿಂಗೇಶ್ವರ ದೇ: ನಂದಿಕೊರಳಿ, ಚಿಕ್ಕೋಡಿ ತಾ.	- " -	20,000-00
12.	ಶ್ರೀ ಮಾರುತಿ ದೇ: ಹನುಮಸಾಗರ, ರಾಂ ದುರ್ಗ	- " -	15,000-00
13.	ಶ್ರೀ ವಿಟಲ ದೇ: ವಿಶ್ವಸ್ಥ ಮಂಡಳಿ, ಕುನ್ನಾಳಿ ರಾಂದುರ್ಗ	- " -	15,000-00
14.	ಶ್ರೀ ಅಕ್ಕಮ್ಮದೇವಿ ದೇ: ಚಿಪ್ಪಲಕಟ್ಟಿ, ರಾಮದುರ್ಗ ತಾ.	- " -	15,000-00
15.	ಶ್ರೀ ಸ್ವಕುಳ ಸಾಯಿ ಸಮಾಜ ಕಛೇರಿ ಗಲ್ಲಿ ನಿಪ್ಪಾಣಿ	- " -	20,000-00
16.	ಶ್ರೀ ಲೋಕಪ್ರಿಯ ಸಿದ್ದೇಶ್ವರ ಸಾದಿಕ ಸಂಘ ನಿಪ್ಪಾಣಿ	- " -	20,000-00
17.	ಶ್ರೀ ಪಾಂಡುರಂಗ ದೇ: ಪಟ್ಟಣಗುಡಿ, ನಿಪ್ಪಾಣಿ	- " -	20,000-00
18.	ಶ್ರೀ ಮಹಾಲಕ್ಷ್ಮೀ ಮಂದಿರ, ಪುಟಣಾವಾಡಿ ನಿಪ್ಪಾಣಿ	- " -	20,000-00

1	2	3	4
19.	ಶ್ರೀ ಸಿದ್ದಾರೂಢ ಸಾಮೀಜಿ ಟ್ರಸ್ಟ್ ಸಮಿತಿ ಹಳ್ಳೂರ ಗೋಕಾಕ್	ಕಂಇ 60 ಮುಆಬಿ 98, ದಿನಾಂಕ 25-6-99	25,000-00
20.	ಶ್ರೀ ಬಸವೇಶ್ವರ ದೇ: ಸುಂಕುಂದಿ, ತಾ ಬೈಲಹೊಂಗಲ	- " -	20,000-00
21.	ಶ್ರೀ ಸಿದ್ದಬಸವೇಶ್ವರ ದೇ: ಟ್ರಸ್ಟ್ ಕಮಿಟಿ, ಬೈಲವಾಡ, ಬೈಲಹೊಂಗಲ	- " -	20,000-00
22.	ಶ್ರೀ ಕಲ್ಮೇಶ್ವರ ಟ್ರಸ್ಟ್ ಕಮಿಟಿ, ಮೇಕಲಮರಡಿ ಬೈಲಹೊಂಗಲ	- " -	20,000-00
23.	ಶ್ರೀ ಸಿದ್ದಬಸವೇಶ್ವರ ದೇ: ಬೈಲವಾಡವರ್ತಿ, ಬೈಲಹೊಂಗಲ	- " -	20,000-00
24.	ಶ್ರೀ ಬೀರದೇವರ ದೇ: ಮುರುಗೋಡು ಸವದತ್ತಿ	- " -	20,000-00
25.	ಶ್ರೀ ಮಲ್ಲಿಕಾರ್ಜುನ ದೇ: ಮುರುಗೋಡು ಸವದತ್ತಿ	- " -	20,000-00
26.	ಶ್ರೀ ಐಳೇಗಾಂವ್ ಬಸವೇಶ್ವರ ದೇ: ಟ್ರಸ್ಟ್ ಕಮಿಟಿ, ಐಳೇಗಾಂವ ಅಥಣಿ	- " -	20,000-00
27.	ಶ್ರೀ ಬಸವೇಶ್ವರ ದೇ: ಐಳೇಗಾಂವ್, ಅಥಣಿ	- " -	20,000-00
28.	ಶ್ರೀ ಯಲ್ಲಮ್ಮ ದೇ: ಟ್ರಸ್ಟ್ ತೇಸಂಗ, ಅಥಣಿ	- " -	20,000-00
29.	ಶ್ರೀ ಬಸವಣ್ಣ ದೇ: ಟ್ರಸ್ಟ್ ಕಮಿಟಿ, ಬುರ್ಲಟ್ಟಿ, ಅಥಣಿ	- " -	20,000-00
30.	ಶ್ರೀ ಕಾಡಸಿದ್ದೇಶ್ವರ ದೇ: ಟ್ರಸ್ಟ್ ಕಮಿಟಿ ಕೂಕಟನೂರು	- " -	20,000-00
31.	ಶ್ರೀ ಕರಿಸಿದ್ದೇಶ್ವರ ದೇ: ಕೂಕಟನೂರು ಅಥಣಿ	- " -	25,000-00
32.	ಶ್ರೀ ವಿಠಲ ಮಂದಿರ, ನಿಪ್ಪೂರ, ಹುಕ್ಕೇರಿ ತಾ.	ಕಂಇ 48 ಮುಆಬಿ 99, ದಿನಾಂಕ 14-10-99	20,000-00

1	2	3	4
33.	ಶ್ರೀ ಮಾರುತಿ ದೇ: ಮಂದಿರ, ಕುಣಿಗಲಾ ಹುಕ್ಕೇರಿ	ಕಂಣ 48 ಮುಆಬಿ 98, ದಿನಾಂಕ 14-10-99	20,000-00
34.	ಶ್ರೀ ವಿಠಲ ಮಂದಿರ, ಕೆರೆ ಹೊಸೂರು ಹುಕ್ಕೇರಿ	- " -	20,000-00
35.	ಶ್ರೀ ಹನುಮಾನ್ ದೇ: ನಾಗನೂರು ಕಂ.ಎಂ.ತಾ. ಹುಕ್ಕೇರಿ	- " -	20,000-00
36.	ಶ್ರೀ ಬಸವೇಶ್ವರ ದೇ: ಅಲೂರು ಕೆ.ಎಂ.ತಾ	- " -	20,000-00
37.	ಶ್ರೀ ಲಕ್ಷ್ಮಿ ದೇ: ಕರಟಗಿ ತಾ ಹುಕ್ಕೇರಿ	- " -	50,000-00
38.	ಶ್ರೀ ಕಾಳಬೈರ ದೇ: ಹಡಗಲಾ ತಾ. ಹುಕ್ಕೇರಿ	- " -	20,000-00
39.	ಶ್ರೀ ಮಾರುತಿ ಮಂದಿರ, ನಾಗನೂರು ಕೆ.ಎನ್. ತಾ ಹುಕ್ಕೇರಿ	- " -	20,000-00
40.	ಶ್ರೀ ಬಸವೇಶ್ವರ ದೇ: ಆಕ್ಕಿವಾಟ, ಹುಕ್ಕೇರಿ	- " -	20,000-00
41.	ಶ್ರೀ ಬತ್ತಮಂದಿರ, ಬುಗಟಿರೂರು, ಹುಕ್ಕೇರಿ	- " -	20,000-00
42.	ಶ್ರೀ ಲಕ್ಷ್ಮಿ ಮಂದಿರ, ನಿಡನೋಶಿ, ಹುಕ್ಕೇರಿ	- " -	20,000-00
43.	ಶ್ರೀ ಸತ್ಯವೀರೇಶ್ವರ ದೇ: ಹಟ್ಟಿಮರಡಿ ಹಿರೇಕೋಡಿ	- " -	70,000-00
44.	ಶ್ರೀ ಸತ್ಯವೀರೇಶ್ವರ ದೇ: ಹಟ್ಟಿಮರಡಿ ಹಿರೇಕೋಡಿ	ಕಂಣ 107 ಮುಆಬಿ 98, ದಿನಾಂಕ 9-7-99	5,000-00
45.	ಶ್ರೀ ಸಿದ್ದೇಶ್ವರ ದೇ: ಗಣಿಕೊಪ್ಪ, ಬೈಲಹೊಂಬಲ	ಕಂಣ 48 ಮುಆಬಿ 99, ದಿನಾಂಕ 14-10-99	20,000-00
			10,35,000-00

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ 4,67,468-00 ರೂಪಾಯಿಗಳನ್ನು ತೆಗೆದುಕೊಂಡು ಬೇರೆ ಜಿಲ್ಲೆಗೆ ಕೊಟ್ಟಿದ್ದಾರೆಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನಗೆ ಬೆಳಗಾಂ ಚಾರಿಟಿ ಕಮೀಷನರ್ ರವರು 44,77,00 ರೂಗಳೆಂದು ನನಗೆ ಉತ್ತರವನ್ನು ಕೊಟ್ಟಿದ್ದಾರೆ, ಇದರಲ್ಲಿ ಯಾವುದು ಖರೆ? ಅವರು ನನಗೆ 44 ಲಕ್ಷ ರೂಪಾಯಿಗಳು ಎಂದು ಪತ್ರವನ್ನು ಬರೆಯುತ್ತಾರೆ, ಇವರು ಉತ್ತರದಲ್ಲಿ 40 ಲಕ್ಷ ರೂಪಾಯಿಗಳು ಎಂದು ಬರೆದಿದ್ದಾರೆ. ಇದರಲ್ಲಿ ಯಾವುದು ಖರೆ? ಅಲ್ಲದೇ ಹಿಂದಕ್ಕೆ ಪಡೆದ ಹಣದಲ್ಲಿ 20.00 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ, ಅದೇ ದೇವಸ್ಥಾನಗಳಿಗೆ ಕೊಡುವ ಬಗ್ಗೆ ಧರ್ಮದತ್ತಿ ಆಯುಕ್ತರು, ಬೆಳಗಾಂ, ಇವರು ಪರಿಶೀಲಿಸಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವರು ಎಂದು ಉತ್ತರದಲ್ಲಿ ಹೇಳಿದ್ದಾರೆ. 44 ಲಕ್ಷ ರೂಪಾಯಿಗಳಲ್ಲಿ 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ, ನೀವೇ ಯಾವ ಯಾವ ದೇವಸ್ಥಾನಗಳಿಗೆ ಕೊಡಬೇಕೆಂಬ ಬಗ್ಗೆ ಬೆಳಗಾಂ ಚಾರಿಟಿ ಕಮೀಷನರ್ ರವರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ? ಈಗಾಗಲೇ ಅವರು ದುಡ್ಡು ಹೊಡೆಯುತ್ತಿದ್ದಾರೆ, ಅವರು 10 ಪರ್ಸೆಂಟ್ ಹಣ ಇಲ್ಲದೆ ಬಿಡುಗಡೆ ಮಾಡುವುದೇ ಇಲ್ಲ. ಹಿಂದೆಯೂ ನಾನು ಈ ಬಗ್ಗೆ ಹೇಳಿದ್ದೇನೆ, ಈಗಲೂ ಸಹ ಹೇಳುತ್ತಿದ್ದೇನೆ. ಇದೇನೂ ಓಪನ್ ಸಿಕ್ರೇಟ್ ಪ್ರಶ್ನೆಯಲ್ಲ, ಅಲ್ಲಿ ಟ್ರಸ್ಟ್ ಮಾಡುವುದಕ್ಕೆ ತೊಂದರೆ ಇದೆ, ಆ ಕಾರಣವನ್ನು ನಾನು ಹಿಂದೆಯೂ ಹೇಳಿದ್ದೇನೆ. ಅದೇನಾದರೂ ಮಾಡಿ ಬೇರಿ ಜಿಲ್ಲೆಗಳಿಗೆ ಬಿಡುಗಡೆ ಮಾಡಿ, ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವಂತೆ ನಾವು ಕೇಳಿದ್ದೆವು, ಅದನ್ನು ಮಾಡುತ್ತೀರಾ? ಹೊಸ ಕಾಯ್ದೆ ಜಾರಿಗೆ ಬಂದಮೇಲೆ ಮಾಡುತ್ತೇವೆ ಎಂದು ಹೇಳಿದ್ದೀರಿ, ಆ ಕಾಯ್ದೆಯನ್ನು ಜಾರಿಗೆ ಕೊಡುವುದಕ್ಕೆ ನಿಮಗೇನು ತೊಂದರೆ ಇದೆ? ಅದು ರಾಷ್ಟ್ರಪತಿಯವರ ಸಹಿಯಾಗಿ ಬಂದು 5-6 ತಿಂಗಳುಗಳಾಗಿದೆ. ಕಾಯ್ದೆಯನ್ನು ಜಾರಿಗೆ ಕೊಡಲು ಅಂತಹ ತೊಂದರೆ ಏನು ಇದೆ? ಹಿಂದಕ್ಕೆ ಪಡೆದ ಹಣದಲ್ಲಿ 20 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದೀರಲ್ಲಾ ಈ ಹಣವನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿದ್ದೀರೋ ಅಥವಾ ನಮಗೆ ಹೋದ ವರ್ಷ ಕೊಡಬೇಕಾದ ಹಣವನ್ನು ಬಿಟ್ಟು ಬಿಡುಗಡೆ ಮಾಡಿದ್ದೀರೋ? ನಮಗೆ ಇನ್ನೂ ಹಣವನ್ನು ಕೊಡಲಿಲ್ಲ. 2000-01ರಲ್ಲಿ 60 ಸಾವಿರ ರೂಪಾಯಿಗಳನ್ನು ಮೊದಲು ಬಿಡುಗಡೆ ಮಾಡಿರಿ. ನಮಗೆ ಒಂದಿಷ್ಟು ಬಿಡುಗಡೆ ಮಾಡಿಲ್ಲ. ಅಂದರೆ ಇದರರ್ಥ ಅವರ ರೊಕ್ಕವನ್ನು ತೆಗೆದು ಅವರಿಗೆ ಕೊಟ್ಟಿದ್ದಾರೆ. ಆದರಿಂದಾಗಿ ನಮಗೆ ಕೊಟ್ಟಹಾಗೆ ಆಗಲಿಲ್ಲವಲ್ಲಾ? ಹೋದ ವರ್ಷ ನಮಗೆ ಹಣವನ್ನು ಬಿಡುಗಡೆ ಮಾಡಲಿಲ್ಲ. ಆ ಕಾರಣದಿಂದ ಆ ರೊಕ್ಕವನ್ನು ಬಿಡುಗಡೆ ಮಾಡಲು ಹೆಚ್ಚುವರಿಯಾಗಿ ಇದನ್ನು ಬಿಡುಗಡೆ ಮಾಡಿದ್ದೀರೋ ಅಥವಾ ನಮಗೆ ಕೊಡಬೇಕಾದ ರೊಕ್ಕವನ್ನು ಬಿಡುಗಡೆ ಮಾಡಿದ್ದೀರೋ ಎಂಬುದನ್ನು ಕೂಡ ಹೇಳಬೇಕಾಗುತ್ತದೆ.

ಶ್ರೀಮತಿ ಸುಮಾ ವಸಂತ್:- ಮಾನ್ಯ ಅಧ್ಯಕ್ಷರೆ, ಹೊಸ ಆಕ್ಟ್‌ಗೆ ನಿಯಮವನ್ನು ರೂಪಿಸುವುದಕ್ಕೆ ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಬೇಕಾಗಿದೆ. ಆ ನಿಯಮವನ್ನು ರೂಪಿಸಿದ ತಕ್ಷಣ ಹೊಸ ಆಕ್ಟ್‌ನ್ನು ನಾವು ಸದ್ಯದಲ್ಲೇ ಬಿಡುಗಡೆ ಮಾಡುತ್ತೇವೆ. 2002-03ನೇ ಸಾಲಿನಲ್ಲಿ ಬೆಳಗಾಂಗೆ ಹೆಚ್ಚುವರಿ ಅನುದಾನವನ್ನು ಕೇಳಿದ್ದಾರೆ, ಅದನ್ನು ನಾವು ಬಿಡುಗಡೆ ಮಾಡುತ್ತೇವೆ.

ಈಗಾಗಲೇ ತಾವು ಕೇಳಿದ ಪ್ರಶ್ನೆಗೆ 1998-90ನೇ ಸಾಲಿನಲ್ಲಿ ಬಿಡುಗಡೆಯಾದ ಹಣ 36.10 ಲಕ್ಷ ರೂಪಾಯಿ ಮತ್ತು ಇದರ ಮೇಲಿನ ಬಡ್ಡಿ 4,67,468-00 ರೂಪಾಯಿಗಳು ಸೇರಿ ಒಟ್ಟು 40,77,468-00 ರೂಪಾಯಿಗಳನ್ನು ಸರ್ಕಾರವು ಹಿಂತೆಗೆದುಕೊಂಡು ರಾಜ್ಯದ ಇತರೆ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮರುಹಂಚಿಕೆ ಮಾಡಲು ಆದೇಶಿಸಲಾಗಿರುತ್ತದೆ. ಈಗ ರದ್ದುಪಡಿಸಲಾದ ಧಾರ್ಮಿಕ ಸಂಸ್ಥೆಗಳ ಪರ್ಯಾಯ ಅಭಿವೃದ್ಧಿ ಕಾಮಗಾರಿಗೆ 2001-02ನೇ ಸಾಲಿನಲ್ಲಿ 20 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಇನ್ನು ಉಳಿದ ಮೊತ್ತವನ್ನು ಈ ಧಾರ್ಮಿಕ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಬೆಳಗಾಂ ಧಾರ್ಮಿಕ ದತ್ತಿ ಆಯುಕ್ತರವರು ಕ್ರಮ ಕೈಗೊಳ್ಳುತ್ತಾರೆ. ಹೆಚ್ಚುವರಿ ಅನುದಾನವಲ್ಲದೆ ಉಳಿದ ಮೊತ್ತವನ್ನು 2002-03ನೇ ಸಾಲಿನಲ್ಲಿ ಮಂಜೂರು ಮಾಡಲು ಸರ್ಕಾರ ಕ್ರಮವನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಂದ ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ಈಗ ಧಾರ್ಮಿಕ ದತ್ತಿ ಆಯುಕ್ತರಿಗೆ 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ, ನೀವು ಯಾವುದಾದರೂ ದೇವಸ್ಥಾನಕ್ಕೆ ಆ ಹಣವನ್ನು ಕೊಡಿ ಎಂದು ತಿಳಿಸಬೇಕು. ತಾವು ನೇರವಾಗಿ ಇಂತಿಂಥ ದೇವಸ್ಥಾನಗಳಿಗೆ ಇಂತಿಷ್ಟು ಹಣವೆಂದು ಇಲ್ಲಿಂದಲೇ ಅವರಿಗೆ ತಿಳಿಸಬೇಕು. ಇಲ್ಲದಿದ್ದರೆ ಅವರು ದುಡ್ಡನ್ನು ಹೊಡೆಯುತ್ತಾರೆ. ತಾವು ಹಣವನ್ನು ಕೊಡದೇ ಇದ್ದರೆ ಅವರು ಹಣವನ್ನು ಬಿಡುಗಡೆ ಮಾಡುವುದಿಲ್ಲ. ತಾವು ಇಲ್ಲಿಂದ 20 ಲಕ್ಷ ರೂಗಳನ್ನು ಇಂತಿಂಥ ದೇವಸ್ಥಾನಗಳಿಗೆ ಇಂತಿಷ್ಟು ಹಣವೆಂದು ಬರೆಯಬೇಕು. ಅವರಿಗೇ ತಾವು ಅಧಿಕಾರವನ್ನು ಕೊಟ್ಟರೆ, ಮೊದಲು ಬಂದ ಹಣವನ್ನು, ಅವರಿಗೆ ಕೊಡುತ್ತಾರೆ. ಆ ಕಾರಣದಿಂದ ಮೊದಲು ಅದನ್ನು ಮಾಡಬೇಕು, ನಮಗೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿದ್ದೀರೋ ಅಥವಾ ನಮಗೆ ಹೋದ ವರ್ಷ ಬಂದ್ ಮಾಡಿದ ಹಣವನ್ನು ಬಿಡುಗಡೆ ಮಾಡಿದ್ದೀರೋ? ಅದಕ್ಕೆ ಉತ್ತರ ನಮಗೆ ಬೇಕಾಗಿದೆ. ಚಾರಿಟಿ ಕಮೀಷನರ್‌ರವರು 6 ತಿಂಗಳಾದರೂ ಕೂಡ ನಿಮ್ಮ ಆಕ್ಟ್‌ನ್ನು ಜಾರಿಗೆ ಕೊಡಲಿಕ್ಕೆ ಆಗಲಿಲ್ಲ. ರೂಲ್ಸ್‌ನ್ನು ಮಾಡುವುದಕ್ಕೆ 6 ತಿಂಗಳ ಕಾಲ ಬೇಕಾ? ಎಷ್ಟು ದಿವಸದಲ್ಲಿ ಮಾಡುತ್ತೀರಾ? ಎಷ್ಟು ದಿವಸದಲ್ಲಿ ಜಾರಿಗೆ ಕೊಡುತ್ತೀರಿ?

ಶ್ರೀಮತಿ ಸುಮಾ ವಸಂತ್:– ಸಧ್ಯದಲ್ಲಿ ನಾವು ರೂಲ್ಸ್‌ನ್ನು ಮಾಡುತ್ತೇವೆ, ಇನ್ನು 15 ದಿವಸಗಳಲ್ಲಿ ಅದನ್ನು ಜಾರಿಗೆ ಕೊಡುತ್ತೇವೆ. ಮುಜರಾಯಿ ಶಾಖೆ ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ...

ಶ್ರೀ ಬಿ.ಆರ್. ಯಾವಗಲ್:– ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಆ ವಿಭಾಗದಿಂದ ಸುಮಾರು 30 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಹಣ ಮೀರಿ ಇದನ್ನು ಇನ್ನು ಬೇರೆ ವಿಭಾಗಕ್ಕೆ ವರ್ಗಾವಣೆ ಮಾಡಿದಂತಹ ಆದೇಶವನ್ನು ಮಾನ್ಯ ಮುಖ್ಯಮಂತ್ರಿಗಳು ತಡೆಹಿಡಿದಿದ್ದರು. ಅದನ್ನು ಜಾರಿಗೆ ಕೊಡುವುದಕ್ಕೆ ಆಗಿರಲಿಲ್ಲ. ಆ ಹಣವನ್ನು ಮರು ಆ ವಿಭಾಗಕ್ಕೆ ಕೊಟ್ಟಿದ್ದೀರಾ? ಏನು ಪ್ರೊಸೀಜರ್ ಇದೆ. ಈವಾಗಲೇ ರೂಲ್ಸ್ ಮಾಡಬೇಕು, ಜಿಲ್ಲಾಧಿಕಾರಿಗಳಿಗೆ ಕೊಡಬೇಕು. ಅದು ಆಗುವವರೆಗೆ ಈಗ ಲ್ಯಾಪ್ಸ್ ಆಗಿ, ಮತ್ತೆಲ್ಲಾ ಹೋಗಿ ಇದರಲ್ಲಿ ಬಹಳಷ್ಟು ತೊಂದರೆಯಿದೆ? ಹಣ ಪಡೆಯುವುದೆಂದರೆ ಬಹುತೇಕ ನೀಡಿದಂತಹ ಹಣದಲ್ಲಿ ಅರ್ಧ ಪಾಲು ಪೋಲಾಗಿ ಹೋಗುತ್ತದೆ. ಅದು ದೇವರ ಹಣ ಇರಬಹುದು ಅಥವಾ ಯಾವುದೇ ಹಣವಿರಬಹುದು.

ಅದನ್ನು ತಪ್ಪಿಸುವುದಕ್ಕೋಸ್ಕರ ಈ ಅವಧಿಯಲ್ಲಿ ಏನಾದರೂ ಕ್ರಮವನ್ನು ತೆಗೆದುಕೊಂಡು ಕನಿಷ್ಠ ಇಂಟೀರಿಯಮ್ ಆಗಿ ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿ. ಆ ಹಣವನ್ನು ಒದಗಿಸಿಕೊಡಬೇಕು. ಇದು 1998-99ನೇ ಸಾಲಿನಲ್ಲಿ ಆಗಿದೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಎರಡು ಸಾರಿ ಹಣವನ್ನು ಮಂಜೂರು ಮಾಡಿದ್ದರು. ಆ ಹಣವನ್ನು ಪಡೆಯಲಿಕ್ಕೆ ತಾಂತ್ರಿಕ ಮಂಜೂರಾತಿಗಾಗಿ ನಾವೇ ಸುಮಾರು ಒಂದು ವಾರದ ಕಾಲ ಇಲ್ಲಿ ಸರ್ಕಾರದ ಕಾರ್ಯದರ್ಶಿಗಳ ಮಟ್ಟದಲ್ಲಿ ಓಡಾಡಿದೆವು, ಅದು ಆಗಲಿಲ್ಲ. ಕೊನೆಗೆ ಬೇಸತ್ತು ಹೊರಟ ಹೋದೆವು. ಆ ಒಂದು ಪದ್ಧತಿಯನ್ನು ತುರ್ತು ಬದಲಾಯಿಸಿ ಹಣವನ್ನು ಅದಷ್ಟು ಬೇಗ ಕಳುಹಿಸುವಂತಹ ಪ್ರಯತ್ನ ಮಾಡಬೇಕು. ಆ ತಡೆ ಹಿಡಿದ ಹಣವು ಏನಾಯಿತೆಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀಮತಿ ಸುಮಾ ವಸಂತ್:- 1998-99ನೇ ಸಾಲಿನಲ್ಲಿ ಉಳಿಕೆಯಾದ ಹಣವನ್ನು ರಾಜ್ಯ ಸರ್ಕಾರವು ಇತರೆ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮರು ಹಂಚಿಕೆ ಮಾಡಲು ಆದೇಶಿಸಲಾಗಿತ್ತು. ಈಗಾಗಲೇ ನಾವು 20 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಮುಂದೆ 2002-03ನೇ ಸಾಲಿನಲ್ಲಿ ಉಳಿದ 20 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡುತ್ತೇವೆ ಮತ್ತು 2002-03ನೇ ಸಾಲಿನಲ್ಲಿ ನಾವು ನಿಮ್ಮ ಕೋರಿಕೆಯ ಮೇಲೆ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಎ.ಬಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಈ ಚರ್ಚೆಯೂ ಸುಮಾರು ಒಂದೂವರೆ ಮತ್ತು ಎರಡು ವರ್ಷಗಳಿಂದ ಪ್ರಾರಂಭವಾಗಿದೆ. 1999ನೇ ಸಾಲಿನಲ್ಲಿ ಸುಮಾರು 44 ಲಕ್ಷ ರೂಪಾಯಿಗಳನ್ನು ಈ ಧಾರ್ಮಿಕ ಧತ್ತಿ ವಿಭಾಗದಲ್ಲಿಯೂ ಕೂಡ ಹಣವನ್ನು ಬಿಡುಗಡೆ ಮಾಡಿದ್ದಾರೆ. ಇವತ್ತು ಎಲ್ಲಾ ಸದಸ್ಯರ ಒತ್ತಾಯವೇನೆಂದರೆ, ಅಲ್ಲಿಂದ ಹಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಾವು ನೇರವಾಗಿ ಜಿಲ್ಲಾಧಿಕಾರಿಗಳ ಮುಖಾಂತರವಾಗಿ ಯಾರ್ಯಾರಿಗೆ ಅಲಾಟ್‌ಮೆಂಟ್ ಆಗಿದೆ ಅವರಿಗೆ ತಾವು ಆರಾಧನ ಸ್ಕೀಮ್ ತರಹ ಮಾಡಬಹುದು. ನೀವು ನೇರವಾಗಿ ಜಿಲ್ಲಾಧಿಕಾರಿಗಳ ಮುಖಾಂತರವಾಗಿ ಈ ಹಣವನ್ನು ಇದನ್ನು ಬೇರೆ ಕಡೆಗೆ ವರ್ಗಾವಣೆ ಮಾಡದೆ, ಅದೇ ಗುಡಿಗಳಿಗೆ ಅಂದರೆ ದೇವಸ್ಥಾನಗಳಿಗೆ ಬಿಡುಗಡೆ ಮಾಡುತ್ತೀರಾ? ಅದನ್ನು ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಇವತ್ತು ತಾವು ಕಾಯಿದೆಯನ್ನು ಬದಲಾವಣೆ ಮಾಡುತ್ತೀರೆಂದು ಹೇಳುತ್ತಿದ್ದೀರಿ. ಅದು ಇನ್ನು ಬಹಳ ತಡವಾಗಬಹುದು. ತಕ್ಷಣ ಇದನ್ನು ನೀವು ಜಿಲ್ಲಾಧಿಕಾರಿಗಳ ಮುಖಾಂತರ ಅದೇ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರವಾಗಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀಮತಿ ಸುಮಾ ವಸಂತ್:- ಬೆಳಗಾಂ ಜಿಲ್ಲೆಯಲ್ಲಿ ಒಂದು ಸಮಸ್ಯೆ ಇದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರವೇ ನಾವು ನೇರವಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆ. ಆದರೆ ಮುಜರಾಯಿ ಇಲಾಖೆ ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ವಿವಿಧ ಕಾಯಿದೆಗಳ ಅಡಿಯಲ್ಲಿ ಕಾರ್ಯಚರಣೆಯನ್ನು ಮಾಡುತ್ತಿದೆ. ಬೆಳಗಾಂ ವಿಭಾಗಕ್ಕೆ ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯಿದೆ 1950ರ ಅಡಿಯಲ್ಲಿ ನಿಯಮಗಳು ಅನ್ವಯವಾಗುತ್ತದೆ. ಈ ನಿಯಮಗಳ ಪ್ರಕಾರವಾಗಿ ದೇವಸ್ಥಾನದ ಅಭಿವೃದ್ಧಿಗೆ ಅನುದಾನ ಕೋರಿ ಬರುವ ಮನವಿಗಳು ನೇರವಾಗಿ ಹಣವನ್ನು ಮಂಜೂರು ಮಾಡಿಕೊಡುವಂತಿಲ್ಲ. ಇದಕ್ಕೆ ಬದಲಾಗಿ ಆ ದೇವಸ್ಥಾನಗಳ

ಟ್ರಸ್ಟ್‌ವೊಂದನ್ನು ರೆಚಿಸಿ, ಅದನ್ನು ನೋಂದಾಯಿಸಿ, ಆ ಟ್ರಸ್ಟ್ ಮೂಲಕವೇ ನೀಲಿ ನಕಾಶೆ, ಅಂದಾಜು ಪಟ್ಟಿ ಮುಂತಾದವುಗಳನ್ನು ತಯಾರಿಸಿ ಧಾರ್ಮಿಕ ಧತ್ತಿ ಆಯುಕ್ತರು. ಬೆಳಗಾಂ ಇವರ ಕಛೇರಿಯಲ್ಲಿ ನೋಂದಾಯಿಸಿಕೊಂಡ ನಂತರ, ಆ ನೋಂದಾಣಿಕೆಯ ಕೋರಿಕೆಯ ಬಗ್ಗೆ ಅರ್ಜಿ ಸಲ್ಲಿಸಿ ಅವರು ಪರಿಶೀಲನೆ ಮಾಡಿದ ನಂತರ ಅನುದಾನವನ್ನು ಬಿಡುಗಡೆ ಮಾಡುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಹೊಸ ಆಕ್ಟ್ ಬಂದನಂತರ ನೇರವಾಗಿ ಜಿಲ್ಲಾಧಿಕಾರಿಗಳ ಮುಖಾಂತರ ಆಯಾಯ ದೇವಸ್ಥಾನಗಳಿಗೆ ಹಣವನ್ನು ಬಿಡುಗಡೆ ಮಾಡುತ್ತೇವೆ.

ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಉಪ ವಿಭಾಗಾಧಿಕಾರಿಗಳ ಕಛೇರಿ ಪ್ರಾರಂಭಿಸುವುದು

68 (669) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರ ಜಿಲ್ಲಾ ಕೇಂದ್ರವಾಗಿದ್ದು, ಉಪ ವಿಭಾಗಾಧಿಕಾರಿಗಳ ಕಛೇರಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಉಪ ವಿಭಾಗಾಧಿಕಾರಿಗಳ ಕಛೇರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಹೌದು. ಬಂದಿದೆ

ಆ) ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಪರಿಶೀಲನಾ ಹಂತದಲ್ಲಿದೆ.

ಶ್ರೀ ಸಿ. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈ ಪ್ರಶ್ನೆಯು ಕಳೆದ ಅಧಿವೇಶನದಲ್ಲೂ ಕೂಡ ಉದ್ಭವವಾಗಿತ್ತು, ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ, 'ಹೌದು ಬಂದಿದೆ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿರುವ ಎರಡನೆಯ ಪ್ರಶ್ನೆಗೆ, ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಪರಿಶೀಲನಾ ಹಂತದಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ನಾನು ಕಳೆದ ಅಧಿವೇಶನದಲ್ಲಿ ಕೇಳಿದಾಗ ಏನು ಉತ್ತರವನ್ನು ಕೊಟ್ಟಿದ್ದರೋ ಅದೇ ಉತ್ತರವು ಕೂಡ ಈಗಲೂ ಬಂದಿದೆ. ಇಲ್ಲಿ ನಾನು ಮಾನ್ಯ ಮಂತ್ರಿಗಳನ್ನು ಕೇಳುವುದೇನೆಂದರೆ, ಮಾಜಿ ಮುಖ್ಯಮಂತ್ರಿಗಳಾದ, ಶ್ರೀ ಜೆ.ಹೆಚ್. ಪಟೇಲ್‌ರವರು ಚಾಮರಾಜನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದ್ದಾರೆ. ಹೊಸ ಜಿಲ್ಲೆಗಳನ್ನು ಮಾಡುವಾಗ ನಮ್ಮ ಚಾಮರಾಜನಗರವನ್ನು ಜಿಲ್ಲೆಯನ್ನಾಗಿ ಮಾಡಿ ಕೊಟ್ಟರು. ಅವರು ಜಿಲ್ಲೆಯನ್ನು ಮಾಡಿ 4-5 ವರ್ಷಗಳಾಯಿತು. ನಿಮ್ಮ ಸರ್ಕಾರದವರು ಒಂದು ಉಪವಿಭಾಗವನ್ನು ನಮಗೆ ಕೊಡಲಿಲ್ಲವಲ್ಲಾ? ಇದರ ಬಗ್ಗೆ ನಾವು ಎಷ್ಟು ಸಾರಿ ಕೇಳುವುದು? ನಾನು ಒಂದು ಉದಾಹರಣೆಯನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಚಾಮರಾಜನಗರ ಜಿಲ್ಲಾ ಕೇಂದ್ರಸ್ಥಾನದಲ್ಲಿ ಈ ಉಪವಿಭಾಗಾಧಿಕಾರಿಯ ಕಛೇರಿ ಇಲ್ಲ. ಇದು ಕೊಳ್ಳೇಗಾಲದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜಿ. ರಾಜೂಗೌಡರವರ ತಾಲ್ಲೂಕಿನಲ್ಲಿ ಈ ಕಚೇರಿ